# ಬದಲಾದ ಪ್ರವಾಸದ ಶೈಲಿ–ಧ್ಯೈಲಿ



**ಕಾಲಕ್ಕೆ ತಕ್ಕಂತೆ 'ಪ್ರವಾಸ'ದ ರೂಪುರೇಷೆಗಳೂ ಬದಲಾಗಿವೆ. ಥೇಟ್ ಮನೆಗಳಂತಿರುವ, ಎಲ್ಲ ಅನುಕೂಲಗಳನ್ನು ಹೊಂದಿರುವ ವಾಹನದಲ್ಲೇ ಕುಟುಂಬ, ಸ್ನೇಹಿತರು ವಾರಗಟ್ಟಲೆ ಊರು ಸುತ್ತಲು ಹೊರಟುಬಿಡುವುದು ಸದ್ಯ ವಿದೇಶಗಳಲ್ಲಿ ಚಾಲ್ತಿಯಲ್ಲಿದೆ. ಇಂಥ ಪ್ರವಾಸವನ್ನು ಗುರಿಯಾಗಿಸಿಕೊಂಡೇ ಹಲವು ಕಂಪನಿಗಳು ವ್ಯಾನ್‌ಗಳನ್ನು ಮಾರ್ಪಾಡು ಮಾಡಿ ನೀಡುತ್ತಿವೆ ಕೂಡ. ಭಾರತದಲ್ಲೂ ಇಂಥದ್ದೊಂದು ಸಾಧ್ಯತೆ ಇದೆಯೇ?**

■ ನಿರಂಜನ ವಾನಳ್ಳಿ

ಬಹುಪಾಲು ಮಂದಿಗೆ ಪ್ರವಾಸಕ್ಕೆ ಹೋಗುವ ಆಸೆಯಿರುತ್ತದೆ. ಇದ್ದಲ್ಲೇ ಇರುವ ಏಕತಾನತೆಯಿಂದ ಮುಕ್ತಿ ಕೊಡುವ ಉಪಾಯವೇ ಪ್ರವಾಸ. ಹತ್ತಾರು ವರ್ಷಗಳಿಂದ ಭಿಕ್ಷೆ ಎತ್ತುತ್ತಿದ್ದ ಕುಟುಂಬವೊಂದು ಕನಸು ಕಟ್ಟಿದ್ದು ದಿನನಿತ್ಯ ತಲೆ ಮೇಲೆ ಹಾರುವ ವಿಮಾನದಲ್ಲಿ ಕುಳಿತು ಒಮ್ಮೆ ಪ್ರವಾಸಕ್ಕೆ ಹೋಗಬೇಕು ಎಂದು. ಆ ದಿನವೂ ಅವರ ಜೀವನದಲ್ಲಿ ಬಂದೇ ಬಿಟ್ಟಿತು. ಅವರು ವಿಮಾನ ನಿಲ್ದಾಣದ ನೆಲಹಾಸಿನ ಮೇಲೆ ಕುಳಿತು ಮೇಲೆ ಹಾರುವ, ಇಳಿಯುವ ವಿಮಾನವನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದ ದೃಶ್ಯ ನಾನು ಓದಿದ ಅದ್ಭುತ ನುಡಿಚಿತ್ರಗಳಲ್ಲಿ ಒಂದು.

ಪ್ರತಿಯೊಬ್ಬರೂ ಪ್ರವಾಸಕ್ಕೆ ಹೋಗುತ್ತಾರೆ. ಹೇಗೆ ಹೋಗುತ್ತಾರೆ ಎಂಬುದು ಅವರವರ ಜೇಬಿನ ಸಾಧ್ಯತೆಯನ್ನು ಅವಲಂಬಿಸಿದೆ. ಸ್ವಲ್ಪ ದೂರಕ್ಕಾದರೆ ನಡೆದೇ ಹೋಗಬಹುದು. ಕನ್ನಡ ಶಾಲೆಯಲ್ಲಿ ಓದುವಾಗ ಶಿವಗಂಗಾ ಜೋಗಕ್ಕೆ ನಡೆದೇ ಹೋಗಿದ್ದೆವು. ಈಗ ಶಾಲೆಯವರು ಬಸ್ಸುಗಳನ್ನು ಬಾಡಿಗೆ ಪಡೆದು ದೂರದ ಊರಿಗೆ ಪ್ರವಾಸ ಹೋಗುವ ದೃಶ್ಯಗಳನ್ನು ನೋಡುತ್ತೇವೆ. ಉತ್ತರ ಕರ್ನಾಟಕದವರು ದಕ್ಷಿಣಕ್ಕೂ, ದಕ್ಷಿಣ ಕರ್ನಾಟಕದವರು ಉತ್ತರಕ್ಕೂ ಪ್ರವಾಸ ಹೋಗುವುದು ಪ್ರತಿನಿತ್ಯ ನಡೆಯುವ ವಿದ್ಯಮಾನ.

ಕರ್ನಾಟಕದಲ್ಲೇ ಪ್ರವಾಸ ಹೋಗಬಹುದಾದ ಸ್ಥಳಗಳು ಎಷ್ಟಿವೆಯೆಂದರೆ ಒಂದು ಆಯುಷ್ಯ ಸಾಲದು. ಕಾರು, ಬಸ್ಸು, ರೈಲು, ವಿಮಾನ ಪ್ರವಾಸಕ್ಕೆ ಸಾಮಾನ್ಯವಾಗಿ ಬಳಕೆಯಾಗುವ ವಾಹನಗಳು. ನಂನಮ್ಮ ಹಣದ ಗಂಟನ್ನು ಅವಲಂಬಿಸಿ ಯಾವ ವಾಹನ, ಎಷ್ಟು ದಿನ ಎಂಬುದು ನಿಷ್ಕರ್ಷೆಯಾಗುತ್ತದೆ.

ಹಿಂದೆಲ್ಲ ಪ್ರವಾಸಕ್ಕೆ ಬಂದವರು ಹೋಟೆಲುಗಳಲ್ಲೋ ಕಲ್ಯಾಣ ಮಂಟಪಗಳಲ್ಲೋ

